**ಓ.ಎಸ್. 219/2012**

**ಪಿಡಬ್ಲ್ಯೂ-1**

ಸಾಕ್ಷಿಯನ್ನು ದಿನಾಂಕಃ23.10.2019 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ-2 ಮತ್ತು 6ನೇ ಪ್ರತಿವಾದಿ ಪರ ಶ್ರೀ ಸಿ.ಜಿ.ಸಿ ವಕೀಲರಿಂದ.**

ಅಸಲು ದಾವಾ ಸಂಖ್ಯೆ 107/2004ನ್ನು ಸಲ್ಲಿಸಲು ನಾನು ಮತ್ತು ನನ್ನ ಸಹೋದರ ನಾರಾಯಣಪ್ಪ ಮಾಹಿತಿ ನೀಡಿದ್ದೇವು. 2ನೇ ವಾದಿ 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ ಎಂದರೆ ಸರಿ. ಕಪ್ಪಣ್ಣಗೌಡರ ಮಕ್ಕಳ ಪೈಕಿ ಹಿರಿಯವರು ನಾರಾಯಣಪ್ಪ 1ನೇ ವಾದಿ, 2ನೇಯವರು ತಿಮ್ಮಯ್ಯ 2ನೇ ಪ್ರತಿವಾದಿ, 3ನೇಯವರು ಕಪನಯ್ಯ 2ನೇ ವಾದಿ, 4ನೇಯವರು ಮೂಡ್ಲಗಿರಿಯ್ಯ 4ನೇ ಪ್ರತಿವಾದಿ. 6ನೇ ಪ್ರತಿವಾದಿ ಶ್ರೀನಿವಾಸ ನನಗಿಂತ ಹಿರಿಯವರು ಇರುತ್ತಾರೆ. ಆತನ ಮದುವೆ ಸುಮಾರು 1988 ರಿಂದ 90ರ ನಡುವೆ ಆಗಿರಬಹುದು. 8ನೇ ಪ್ರತಿವಾದಿ 6ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. 9ನೇ ಪ್ರತಿವಾದಿ 6 ಮತ್ತು 8ನೇ ಪ್ರತಿವಾದಿಗಳ ಮಗ ಎಂದರೆ ಸರಿ.

ಮುದ್ದಯ್ಯನಪಾಳ್ಯದ ಗಿಡದ ಕೋಣೆನಹಳ್ಳಿ ದಾಖಲೆ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕಿನ ವಾಸಿ ರಂಗದಾಸಪ್ಪ ನನಗೆ ಪರಿಚಯವಿರುತ್ತಾರೆ. 8ನೇ ಪ್ರತಿವಾದಿ ರಂಗದಾಸಪ್ಪನ ಮೊಮ್ಮಗಳು ಎಂದರೆ ಸರಿ. 8ನೇ ಪ್ರತಿವಾದಿಯನ್ನು ರಂಗದಾಸಪ್ಪನೇ ಮುಂದೆ ನಿಂತು 6ನೇ ಪ್ರತಿವಾದಿಯೊಂದಿಗೆ ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ 8ನೇ ಪ್ರತಿವಾದಿಯ ತಾಯಿ ಮುಂದೆ ನಿಂತು ಮದುವೆ ಮಾಡಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. 8ನೇ ಪ್ರತಿವಾದಿಯ ತಂದೆ ತಾಯಿಯರ ಪೈಕಿ 8ನೇ ಪ್ರತಿವಾದಿ ಮದುವೆಯಾಗುವ ಪೂರ್ವದಲ್ಲಿ ತಂದೆ ತೀರಿ ಹೋಗಿದ್ದರು ನಂತರ ತಾಯಿ ತೀರಿ ಹೋಗಿದ್ದಾರೆ. ರಂಗದಾಸಪ್ಪನವರಿಗೆ ಗಂಡು ಮಕ್ಕಳಿಲ್ಲದ ಕಾರಣ 8ನೇ ಪ್ರತಿವಾದಿ ಮತ್ತು 6ನೇ ಪ್ರತಿವಾದಿ ನಡುವೆ ಮದುವೆಯಾದ ಬಳಿಕ ಅವರನ್ನು ಮುದ್ದಯ್ಯನಪಾಳ್ಯದಲ್ಲಿಯೇ ಇರಿಸಿಕೊಂಡಿದ್ದರು ಎಂದರೆ ಸರಿಯಲ್ಲ.

6ನೇ ಪ್ರತಿವಾದಿ ಹೆಂಡತಿ ಮಕ್ಕಳೊಂದಿಗೆ ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ಸಾಕ್ಷಿ ಕಳೆದ 4-5 ವರ್ಷಗಳಿಂದ ಮಾತ್ರ ಪ್ರತ್ಯೇಕವಾಗಿ ದೊಡ್ಡಮಳಲವಾಡಿ ಗ್ರಾಮದಲ್ಲಿ ಪ್ರತ್ಯೇಕವಾಗಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ಅದಕ್ಕೂ ಪೂರ್ವದಲ್ಲಿ ನಾವೆಲ್ಲರೂ ಒಟ್ಟಾಗಿ ಚಿಕ್ಕಮಳಲವಾಡಿ ಗ್ರಾಮದಲ್ಲಿ ವಾಸವಾಗಿದ್ದೇವು. 6ನೇ ಪ್ರತಿವಾದಿ ಮದುವೆಯಾದ ಕಾಲದಿಂದಲೂ ತನ್ನ ಕುಟುಂಬದೊಂದಿಗೆ ಮುದ್ದಯ್ಯನಪಾಳ್ಯದಲ್ಲಿ ವಾಸವಾಗಿದಾದರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರರು ದಾವೆ ಸಲ್ಲಿಸುವ ಕಾಲಕ್ಕೆ ಪ್ರತ್ಯೇಕವಾಗಿ ವಾಸ

ಮಾಡುತ್ತಿದ್ದೇವು ಎಂದರೆ ಸರಿಯಲ್ಲ, ನಾವು ಪ್ರತ್ಯೇಕವಾಗಿ ವಾಸಮಾಡುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ದಾವಾ ಸಲ್ಲಿಸುವ ಕಾಲಕ್ಕಾಗಲೀ ಅಥವಾ ಇಂದಿಗಾಗಲೀ ನಾವು ಒಟ್ಟು ಕುಟುಂಬದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ, ನನ್ನ ತಂದೆ 1994ರಲ್ಲಿ ಪೌತಿಯಾಗಿದ್ದಾರೆ ಎಂದರೆ ಸರಿ.

ನನ್ನ ತಂದೆಯ ಸಹೋದರರು ನನ್ನ ತಂದೆ ಹಾಗೂ ಇತರರ ವಿರುದ್ಧ ಅಸಲು ದಾವಾ ಸಂಖ್ಯೆ 223/1993ರಂತೆ ವಿಭಾಗ ಕೋರಿ ದಾವೆ ಮಾಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ತಂದೆ ಸ್ವತಃ ಹಾಜರಾಗಿದ್ದರು ಎಂದರೆ ಸಾಕ್ಷಿ ಮೊದಲಿಗೆ ಹಾಜರಾಗಿದ್ದರು ನಂತರ 4ನೇ ಪ್ರತಿವಾದಿಗೆ ಅಧಿಕಾರ ಪತ್ರ ನೀಡಿದ್ದರು ಎಂದು ನುಡಿಯುತ್ತಾರೆ. ಅಧಿಕಾರ ಪತ್ರವನ್ನು ಅಸಲು ದಾವಾ ಸಂಖ್ಯೆ 223/1993ರಲ್ಲಿ ಹಾಜರು ಮಾಡಿದ್ದಾರಾ ಇಲ್ಲವಾ ನನಗೆ ತಿಳಿದಿಲ್ಲ, ಅಧಿಕಾರ ಪತ್ರ ನೀಡಿರುವ ಬಗ್ಗೆ ನನ್ನ ತಂದೆ ತಿಳಿಸಿರುವ ಕಾರಣ ನನಗೆ ತಿಳಿದು ಬಂದಿದೆ. ಸದರಿ ಅಧಿಕಾರ ಪತ್ರವನ್ನು ಅಸಲು ದಾವಾ ಸಂಖ್ಯೆ 223/1993ರಲ್ಲಿ ಹಾಜರುಪಡಿಸಿದ್ದಾರೆಯೇ ಇಲ್ಲವೇ ನಾನು ಪರಿಶೀಲನೆ ಮಾಡಿಲ್ಲ, ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವ ಅಸಲು ದಾವಾ ಸಂಖ್ಯೆ 223/1993ರ ದಾಖಲಾತಿಗಳಲ್ಲಿ ಅಧಿಕಾರ ಪತ್ರ ಹಾಜರುಪಡಿಸಿದ್ದಾರೆಯೇ ಇಲ್ಲವೆ ಎಂಬ ಬಗ್ಗೆ ನಾನು ಪರಿಶೀಲನೆ ಮಾಡಿಲ್ಲ, ನನ್ನ ತಂದೆ ಯಾವುದೇ ಅಧಿಕಾರ ಪತ್ರವನ್ನು 4ನೇ ಪ್ರತಿವಾದಿಗೆ ಅಸಲು ದಾವಾ ಸಂಖ್ಯೆ 223/1993ರಲ್ಲಿ ಹಾಜರಾಗಲು ನೀಡಿರಲಿಲ್ಲ, ಸದರಿ ದಾಖಲೆಯನ್ನು ನಾನು ಸೃಷ್ಟಿ ಮಾಡಿ ಈ ಪ್ರಕರಣದಲ್ಲಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ, ಸದರಿ ಅಧಿಕಾರ ಪತ್ರ ಈ ಪ್ರಕರಣದಲ್ಲಿ ಹಾಜರುಪಡಿಸಲು ಸದರಿ ದಾಖಲೆ ನಮ್ಮ ಮನೆಯಲ್ಲಿತ್ತು. ಸದರಿ ದಾಖಲೆಯನ್ನು 4ನೇ ಪ್ರತಿವಾದಿಯೇ ನಮ್ಮ ಮನೆಯಲ್ಲಿಟ್ಟಿದ್ದರು. 4ನೇ ಪ್ರತಿವಾದಿ ಯಾವುದೇ ದಾಖಲೆಯನ್ನು ಮನೆಯಲ್ಲಿಟ್ಟಿರಲಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನನ್ನ ತಂದೆ 4ನೇ ಪ್ರತಿವಾದಿಗೆ ಕುಟುಂಬದ ಯಜಮಾನಿಕೆ ಮಾಡುವಂತೆ ದಾಖಲೆ ಬರುದುಕೊಟ್ಟಿದ್ದರಾ ಎಂದರೆ ಸಾಕ್ಷಿ ನನ್ನ ತಂದೆಗೆ ಯಾರು ಸರಿ ಅನಿಸದ್ದರೊ ಅವರಿಗೆ ನೀಡಿದ್ದರು ಎಂದು ನುಡಿಯುತ್ತಾರೆ. ನಿಪಿ-75ರಲ್ಲಿ ನನ್ನ ತಂದೆ ಕುಟುಂಬದ ಯಜಮಾನಿಕೆ ಮಾಡಲು ಯಾವುದೇ ಅಧಿಕಾರವನ್ನು 4ನೇ ಪ್ರತಿವಾದಿಗೆ ನೀಡಿಲ್ಲ ಎಂದರೆ ಸರಿಯಲ್ಲ, ಅಧಿಕಾರ ಪತ್ರವನ್ನು ಕುಟುಂಬದ ಯಜಮಾನಿಕೆಯನ್ನು ನೋಡಿಕೊಳ್ಳುವುದಾಗಿ ನೀಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, 4ನೇ ಪ್ರತಿವಾದಿ ಯಾವತ್ತು ಕುಟುಂಬದ ಯಜಮಾನಿಕೆ ಮಾಡಿಲ್ಲ ಎಂದರೆ ಸರಿಯಲ್ಲ, ನನ್ನ ತಂದೆಗೆ ಅಸಲು ದಾವಾ ಸಂಖ್ಯೆ 223/1993 ಸಲ್ಲಿಸಿದ ಕಾಲದಿಂದಲೂ ಆರೋಗ್ಯ ಸರಿಯಿರಲಿಲ್ಲ, ನನ್ನ ತಂದೆಯ ಚಿಕಿತ್ಸೆಗೆ ನನ್ನ ತಾಯಿ ಸಾಲ ಮಾಡಿದ್ದರು ಎಂದರೆ ಸರಿಯಲ್ಲ, ನನ್ನ ತಂದೆಯ ಮರಣಾನಂತರ ಚಿಕಿತ್ಸೆಗಾಗಿ ಮಾಡಿದ

ಸಾಲಗಳು ಹಾಗೆಯೇ ಉಳಿದಿದ್ದವು ಎಂದರೆ ಸಾಕ್ಷಿ ಯಾವುದೇ ಸಾಲ ಇರಲಿಲ್ಲ ಎಂದು ನುಡಿಯುತ್ತಾರೆ.

ಅಸಲು ದಾವಾ ಸಂಖ್ಯೆ 223/1993ರಲ್ಲಿ ನನ್ನ ತಂದೆಯ ಹಿಸ್ಸೆಗೆ ಬಂದ ಸ್ವತ್ತುಗಳನ್ನು ನನ್ನ ತಂದೆಯ ಮರಣಾನಂತರ ನನ್ನ ಎಲ್ಲಾ ಸಹೋದರರು ನನ್ನ ತಾಯಿಯ ಹೆಸರಿಗೆ ಹಕ್ಕು ಬಿಡುಗಡೆ ಮಾಡಿಕೊಟ್ಟು ಖಾತೆ ಮಾಡಿಕೊಟ್ಟಿರುತ್ತವೆ ಎಂದರೆ ಸರಿಯಲ್ಲ. ನನ್ನ ತಾಯಿ ಹಕ್ಕು ಬಿಡುಗಡೆ ಪಡೆದು ತನ್ನ ಹೆಸರಿಗೆ ಖಾತೆ ಪಡೆದು ಸ್ವಾಧೀನ ಹೊಂದಿ ಸದರಿ ಸ್ವತ್ತುಗಳನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಪ್ರತಿವಾದಿ 5 ಮತ್ತು 7ರವರ ವಿವಾಹವನ್ನು ಸಾಲ ಮಾಡಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಾಯಿಗೆ ನಾವು ಹಕ್ಕು ಬಿಡುಗಡೆ ಮಾಡಿಕೊಟ್ಟು ಚಿಕ್ಕಮಳಲವಾಡಿ ಗ್ರಾಮದಿಂದ ಬೇರೆ ಹೋಗಿ ಬೇರೆ ಕಡೆ ಪ್ರತ್ಯೇಕವಾಗಿ ವಾಸವಾಗಿದ್ದೇವೆ ಎಂದರೆ ಸರಿಯಲ್ಲ. ನಾನು ನನ್ನ ತಂದೆಯ ಸಾಯುವ ಪೂರ್ವದಲ್ಲಿ ಮತ್ತು ನಂತರದಲ್ಲಿ ಎಂದಿಗೂ ಚಿಕ್ಕಮಳಲವಾಡಿ ಗ್ರಾಮದಲ್ಲಿ ವಾಸವಾಗಿಲ್ಲ ಎಂದರೆ ಸರಿಯಲ್ಲ.

2ನೇ ಪ್ರತಿವಾದಿಯನ್ನು ತಿಮ್ಮೇಗೌಡ ಎಂದು ಸಹ ಕರೆಯುತ್ತಾರೆ ಎಂದರೆ ಸರಿ. ಆತ ಹಾಲಿ ನಾಗವಲ್ಲಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಆತನ ಮದುವೆಯಾಗಿ ಸುಮಾರು 35 ರಿಂದ 40 ವರ್ಷ ಆಗಿದೆ. ಆತ ಮದುವೆಯಾದ ಕಾಲದಿಂದಲೂ ನಾಗವಲ್ಲಿಯಲ್ಲಿಯೇ ವಾಸವಾಗಿದ್ದಾನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ 1 ರಿಂದ 14ರಲ್ಲಿ ಯಾವುದೇ ಉತ್ಪಾದನೆ ಇಲ್ಲ ಎಂದರೆ ಸರಿಯಲ್ಲ. ಉತ್ಪಾದನೆ ಇರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ದಾವಾ ಷೆಡ್ಯೂಲ್ 1 ರಿಂದ 14ನೇ ಸ್ವತ್ತುಗಳಲ್ಲಿ ರೇಷ್ಮೆ ಅಡಿಕೆ ತೆಂಗು ಇತ್ಯಾದಿ ಇರುವ ಬಗ್ಗೆ ನನ್ನ ವಾದ ಪತ್ರದಲ್ಲಿ ತಿಳಿಸಿರುತ್ತೇನೆ. ನಾನು ಆ ರೀತಿಯಾಗಿ ತಿಳಿಸಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ 15 ರಿಂದ 18ನೇ ಸ್ವತ್ತುಗಳು ಪ್ರತಿವಾದಿ 4 ಮತ್ತು 8ರವರ ಸ್ವಯಾರ್ಜಿತ ಆಸ್ತಿಗಳಾಗಿದ್ದು ನನಗಾಗಲೀ ನನ್ನ ಇತರ ಸಹೋದರರಿಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಮತ್ತು ಸದರಿ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ ಒಟ್ಟು ಕುಟುಂಬ ಅಸ್ತಿತ್ವದಲಿಲ್ಲ ಮತ್ತು ಪ್ರತಿವಾದಿ 2, 4, 6 ಹಾಗೂ ವಾದಿಗಳು ಸದರಿ ಕುಟುಂಬದ ಸದಸ್ಯರಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಕೇಳಿದ ಪರಿಹಾರವನ್ನು ಕೇಳಲು ಅರ್ಹನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ
ಕುಣಿಗಲ್.